ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 671/2021

(ಫ್ರಾಸಾ-1 ಚಾಸಾ-1 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 09.03.2023

| | | |
|---|---|---|
| ಸಾಕ್ಷಿದಾರರ ಹೆಸರು | - | ಮಹೇಶ್ ರೆಡ್ಡಿ |
| ತಂದೆಯ ಹೆಸರು | - | ಮುನಿಸ್ವಾಮಿ ರೆಡ್ಡಿ |
| ವಯಸ್ಸು | - | 60 ವರ್ಷ, |
| ಉದ್ಯೋಗ | - | ವ್ಯವಸಾಯ |
| ವಾಸ | - | ಸಿಂಗೇನ ಅಗ್ರಹಾರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನನ್ನ ತಂದೆಗೆ ನಾವು ಮೂರು ಜನ ಮಕ್ಕಳು. ಆನೇಕಲ್ ತಾಲ್ಲೂಕಿನ ಸಿಂಗೇನ ಅಗ್ರಹಾರದಲ್ಲಿ ನಮಗೆ ಸೇರಿದ ಜಮೀನು ಸರ್ವೆ ನಂಬರ್ 59/5 ಇದೆ. ಆ ಜಮೀನಿನಲ್ಲಿ ಸೈಟ್ ಗಳನ್ನು ಮಾಡಿದ್ದೇವೆ. ಚಾಸಾ-26 ನನ್ನ ದೊಡ್ಡಪ್ಪನ ಮಗ.

2. ದಿಃ01.09.2021 ರಂದು ಬೆಳಗ್ಗೆ ಸುಮಾರು 8.45 ಕ್ಕೆ ಚಾಸಾ-26 ಮುರುಳಿ ನನಗೆ ಫೋನ್ ಮಾಡಿ ಜಮೀನಿನಲ್ಲಿ ಡಬಲ್ ಮರ್ಡರ್ ಆಗಿದೆ ಎಂದು ಹೇಳಿದ. ಮನೆಯಲ್ಲಿದ್ದ ನಾನು ಬೆಳಗ್ಗೆ 9 ಘಂಟೆಗೆ ಜಮೀನಿನ ಹತ್ತಿರ ಹೋದೆ. ಅಲ್ಲಿ ಎರಡು ಪುರುಷರ ಶವ ಇದ್ದವು. ಅವು ಅಂದಾಜು 30-35 ವರ್ಷ ವಯಸ್ಸಿನವರದ್ದು ಇದ್ದವು. ದೊಣ್ಣೆಯಿಂದ ತಲೆಯನ್ನು ಒಡೆದ ಹಾಗೆ, ಚಾಕುವಿನಿಂದ ಚುಚ್ಚಿದ ಗಾಯಗಳು ಶವದ ಮೇಲೆ ಇದ್ದವು. ರಕ್ತ ಚೆಲ್ಲಿತ್ತು. ನಾನು ಪೋಲಿಸರಿಗೆ ಫಿರ್ಯಾದಿಯನ್ನು ನೀಡಿದೆ. ಈಗ ತೋರಿಸಲಾದ ದಾಖಲೆ ನಾನು ನೀಡಿದ ಸದರಿ ಫಿರ್ಯಾದಿ ಇದೆ. ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.

3. ಪೋಲಿಸರು ಘಟನಾ ಸ್ಥಳಕ್ಕೆ ಕೂಡಲೇ ಬಂದರು. ಅಲ್ಲಿ ಶವಗಳನ್ನು ಮತ್ತು ಜಾಗವನ್ನು

ಪರೀಕ್ಷಿಸಿದರು. ಪೋಲಿಸರು ಸ್ಥಳದಿಂದ ಒಂದು ಚಾಕು, ಒಂದು ದೊಣ್ಣೆ, ಡ್ರಿಂಕ್ಸ್ ಬಾಟಲಿಗಳು, ಚಪ್ಪಲಿಗಳು, ಬಟ್ಟೆಗಳು, ರಕ್ತ ಹತ್ತಿದ ಮಣ್ಣು, ಸಾದಾ ಮಣ್ಣು ಇವುಗಳನ್ನು ತೆಗೆದುಕೊಂಡರು. ಆಗ ಮಹಜರ್ ಅನ್ನು ಮಾಡಿದರು. ಸದರಿ ವಸ್ತುಗಳನ್ನು ನೋಡಿದರೆ ಗುರ್ತಿಸುತ್ತೇನೆ. ಅಲ್ಲಿ ಫೋಟೋಗಳನ್ನು ಸಹ ತೆಗೆದರು. ಈಗ ತೋರಿಸಿದ ರಕ್ತ ಮಿಶ್ರಿತ ಮಣ್ಣುಗಳು, ಮಾದರಿ ಮಣ್ಣುಗಳು, ಟೋಪಿ, ನೀಲಗಿರಿ ದೊಣ್ಣೆ, ವಾಕರೂ ಚಪ್ಪಲ್, ರಮ್ ಬಾಟಲಿಗಳು, ಬಕಾರ್ಡಿ ಬಾಟಲಿ, ಗ್ರೇ ಬಣ್ಣದ ಬೆಲ್ಟಿನ ಚಪ್ಪಲಿಗಳನ್ನು ಪೋಲಿಸರು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡಿದ್ದಾರೆ.

4. ಮೊದಲನೇ ಮೃತ ದೇಹ ಎಂದಿರುವ (ಅದು ಮೃತ ರವಿಕುಮಾರ್ ನೆಂದು ಹೇಳಲಾಗಿರುವ) ಸ್ಥಳದಿಂದ ಸಂಗ್ರಹಿಸಲಾಗಿದೆ ಎನ್ನುವ ರಕ್ತ ಹತ್ತಿದ ಮಣ್ಣು ಮು.ಮಾ-1 ಎಂದು, ಸಾದಾ ಮಣ್ಣನ್ನು ಮು.ಮಾ-2 ಎಂದು, ಟೋಪಿಯನ್ನು ಮು.ಮಾ-3 ಎಂದು, ನೀಲಗಿರಿ ದೊಣ್ಣೆಯನ್ನು ಮು.ಮಾ-4 ಎಂದು ಮತ್ತು ವಾಕರೂ ಚಪ್ಪಲಿಯನ್ನು ಮು.ಮಾ-5 ಎಂದು ಗುರ್ತಿಸಲಾಯಿತು.

5. ಎರಡನೇ ಶವ ಬಿದ್ದಿದ್ದ ಸ್ಥಳದಿಂದ (ಅದು ಮೃತ ಚಂದನ್ ದಾಸ್‌ದೆಂದು ಹೇಳಲಾಗಿರುವ) ಸಂಗ್ರಹಿಸಲಾಗಿದೆ ಎಂದು ಎನ್ನುವ ರಕ್ತ ಹತ್ತಿದ ಮಣ್ಣನ್ನು ಮು.ಮಾ-6 ಎಂದು, ಸಾದಾ ಮಣ್ಣನ್ನು ಮು.ಮಾ-7 ಎಂದು, ಚಪ್ಪಲಿಯನ್ನು ಮು.ಮಾ-8 ಎಂದು ಗುರ್ತಿಸಲಾಯಿತು.

6. ಎರಡು ಮೆಕ್ ಡಾವೆಲ್ಸ್ ರಮ್ ಖಾಲಿ ಬಾಟಲಿಗಳನ್ನು ಮತ್ತು ಬಕಾರ್ಡಿ ಖಾಲಿ ಬಾಟಲಿಯನ್ನು ಕ್ರಮವಾಗಿ ಮು.ಮಾ-9, 10 ಮತ್ತು 11 ಎಂದು ಗುರ್ತಿಸಲಾಯಿತು. ಪೋಲಿಸರು ಮು.ಮಾ-1 ರಿಂದ 11 ಇವುಗಳನ್ನು ಬಟ್ಟೆಯಲ್ಲಿ ಪ್ಯಾಕ್ ಮಾಡಿಕೊಂಡು ಸೀಲ್ ಮಾಡಿದರು.

7. ಈಗ ತೋರಿಸಲಾದ ದಾಖಲೆ ಸದರಿ ಮಹಜರ್ ಇದೆ. ಅದನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರ್ತಿಸಲಾಯಿತು. ಈಗ ತೋರಿಸಿದ ಛಾಯಚಿತ್ರಗಳನ್ನು ಆಗ ತೆಗೆಯಲಾಗಿದೆ. ಸದರಿ ಐದು ಛಾಯಚಿತ್ರಗಳನ್ನು

ನಿಪಿ-3 ರಿಂದ 7 ಎಂದು ಗುರ್ತಿಸಲಾಯಿತು. ಚಾಸಾ-2 ಸಹ ಮಹಜರ್ ಸಮಯದಲ್ಲಿ ಇದ್ದು ಮಹಜರ್ ಗೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ.

**ಪಾಟೀ ಸವಾಲುಃ** 2 ನೇ ಆರೋಪಿ ಪರ ವಕೀಲರು ಸಮಯ ಕೋರುತ್ತಾರೆ. ಸಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ** 1 ನೇ ಆರೋಪಿ ಪರ ವಕೀಲರು ಗೈರು ಹಾಜರು. ಅವರನ್ನು ಮಧ್ಯಾಹ್ನ ಕರೆಸುವ ವ್ಯವಸ್ಥೆ ಮಾಡುವುದಾಗಿ 1 ನೇ ಆರೋಪಿ ಹೇಳಿದ್ದರಿಂದ ಮಧ್ಯಾಹ್ನದವರೆಗೆ ಮುಂದೂಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸಾಕ್ಷಿಯನ್ನು ಮಧ್ಯಾಹ್ನ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲುಃ** 1 ನೇ ಆರೋಪಿ ಪರ ವಕೀಲರು ಗೈರು ಹಾಜರು. ಆದ್ದರಿಂದ ಅವರ ಪರವಾಗಿ ಸಹ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು